**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಉಡುಪಿ ಜಿಲ್ಲೆ , ಉಡುಪಿ**

**ಸ್ಪೆಷಲ್ ಕೇಸ್ ನಂಬ್ರ: 58/2021**

ಇವರೊಳಗೆ:
ಸರಕಾರದ ಪರವಾಗಿ ...... ಫಿರ್ಯಾದಿದಾರರು
ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ,
ಉಡುಪಿ

- ವಿರುದ್ಧ -

ರಮೇಶ್ ಮಂಜುನಾಥ ವರ್ಣೆಕರ್ ಮತ್ತು
ಮುನಾಫ್ ಅಲಿಯಾಸ್ ಮುನ್ನ ....... ಆರೋಪಿತರು

ಆರೋಪಿಯ ಹೆಸರು : **ರಮೇಶ್ ಮಂಜುನಾಥ ವರ್ಣೆಕರ್ (ಎ.1)**

ತಂದೆಯ ಹೆಸರು : **ಮಂಜುನಾಥ ವಾಸುದೇವ ವರ್ಣೆಕರ್**

ಪ್ರಾಯ : 63 **ವರ್ಷ**

ಉದ್ಯೋಗ : **ಸೇವಾ ನಿವೃತ್ತ ಸಾರಿಗೆ ಅಧಿಕಾರಿ**

ವಾಸಸ್ಥಳ : **ಮನೆ ನಂಬ್ರ 2-6-376/24, ಅಮೃತ ಸುಧೆ, ಸರಕಾರಿ ಶಾಲೆಯ ಹಿಂಬದಿ, ಬಿಜೈ, ಕಾಪಿಕಾಡ್, ಮಂಗಳೂರು**

**ದಂಡ ಪ್ರಕ್ರಿಯಾ ಸಂಹಿತೆ ಕಲಂ-313 ರ ರೀತ್ಯಾ ಮಾಡುವ ಆರೋಪಿಯ ವಿಚಾರಣೆ :**

ಪ್ರಶ್ನೆ: 1 ನೀವು ಅಭಿಯೋಜನೆ ಸಾಕ್ಷಿದಾರರು ನ್ಯಾಯಾಲಯದ ಮುಂದೆ ನುಡಿದಿರುವಂತಹ ಸಾಕ್ಷ್ಯವನ್ನು ಕೇಳಿದ್ದೀರಾ ?

ಉತ್ತರ: ಹೌದು

ಪ್ರಶ್ನೆ:2 ಫ್ರಾಸಾ-1 ವಿಘ್ನೇಶ್ ಸತೀಶ್ ಕುಮಾರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತನ್ನ ಕಾರು ನಂಬ್ರ ಕೆಎ-20-ಪಿ-5464, ಬೆಂಗಳೂರಿನ ಯಲಹಂಕದ ಜಕ್ಕೂರಿನ ಏರ್ ಪೋರ್ಸ್ ನ ಪಾರ್ಕಿಂಗ್ ಜಾಗೆಯಲ್ಲಿ ಆಕಸ್ಮಿಕವಾಗಿ ಹತ್ತಿದ

ಬೆಂಕಿಯಿಂದಾಗಿ ಸುಟ್ಟು ಹೋಗಿತ್ತು. ಆ ಕಾರಿಗೆ ತಾನು ರೋಡ್ ಟ್ಯಾಕ್ಸ್ ಕಟ್ಟಿದ್ದು, ಸರಕಾರ ವಿಶೇಷ ಯೋಜನೆಯಡಿಯಲ್ಲಿ ಆ ರಸ್ತೆ ಶುಲ್ಕವನ್ನು ಮರುಳಿಸುವುದಾಗಿ ಹೇಳಿದ್ದರು, ಅದರಂತೆ ನನಗೆ ರೂಃ 65 ಸಾವಿರ ಹಣ ಬರಬೇಕಾಗಿತ್ತು, ಅದಕ್ಕಾಗಿ ನನ್ನ ಕಾರು ನೊಂದಣಿಯಾಗಿದ್ದ ಆರ್.ಟಿ.ಓ ದಲ್ಲಿ ಅರ್ಜಿ ಕೊಡುವಂತೆ ತಿಳಿಸಿದ್ದರು, ಅದಕ್ಕಾಗಿ ನಾನು ಉಡುಪಿಯ ಆರ್.ಟಿ.ಓ ಕಚೇರಿಯಲ್ಲಿ ದಿನಾಂಕ 02-03-2019 ರಂದು ನನ್ನ ವಾಹನದ ದಾಖಲೆಗಾಗಿ, ನನ್ನ ಚಾಲನಾ ಪರವಾನಿಗೆಯ ನಕಲಿಗಾಗಿ ಕೋರಿದ್ದೆ. ಆಗ ಸದರಿ ದಾಖಲೆ 15 ದಿನಗಳಲ್ಲಿ ಸಿಗುವುದಾಗಿ ಹೇಳಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ?

ಉತ್ತರಃ ಅರ್ಜಿ ಕೊಟ್ಟಿದ್ದರು

ಪ್ರಶ್ನೆಃ3 ಫ್ರಾಸಾ-1 ಇವರು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ದಿನಾಂಕ 15-03-2019 ರಂದು ನಾನು, ಚಾಸಾ -2 ಇವರೊಂದಿಗೆ ಉಡುಪಿಯ ಆರ್ ಟಿ ಓ ಕಚೇರಿಗೆ ಹೋಗಿ ಅರ್ಜಿಯ ಬಗ್ಗೆ 1 ನೇ ಆರೋಪಿಯಾದ ನಿಮ್ಮ ಬಳಿ ವಿಚಾರಿಸಿದಾಗ, ನೀವು ಅರ್ಜಿ ಮಂಜೂರಾಗಿರುವುದಾಗಿಯೂ, ಅದಕ್ಕಾಗಿ ಆತ ಪಡೆಯಬೇಕಾದ ಹಣದ ಶೇಕಡಾ 10 ರಷ್ಟು ಹಣವನ್ನು ಪಾವತಿಸಬೇಕಾಗುತ್ತದೆ ಎಂದು ಹೇಳಿದಾಗ, ಅವರು ಕೊಡಲು ಆಗುವುದಿಲ್ಲ ಎಂದು ಹೇಳಿದಾಗ, ರೂ 4 ಸಾವಿರವಾದರೂ ಕೊಡಲು ಹೇಳಿದ್ದೀರಿ, ಆ ಮಾತುಕತೆ ಅವರ ಮೊಬೈಲ್ ನಲ್ಲಿ ರೆಕಾರ್ಡ ಮಾಡಿದ್ದರೆಂದು. ಮಾರನೇ ದಿನ ದಿನಾಂಕ 16-03-2019 ರಂದು ಎಸಿಬಿ ಆಫೀಸಿಗೆ ಹೋಗಿ ನಿಶಾನೆ ಪಿ-1 ರ ದೂರನ್ನು ಕೊಟ್ಟಿದ್ದೆ, ಆಗ ಮೊಬೈಲ್ ನಲ್ಲಿ ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಸಹ ಅವರಿಗೆ ಕೇಳಿಸಿದ್ದೆ. ಆಗ ಅವರ ಮೊಬೈಲ್ ನ್ನು ಲ್ಯಾಪ್ ಟಾಪ್ ಮೂಲಕ, ಸಿಡಿಗೆ ಹಾಕಿಕೊಂಡು, ಆ ಸಂಭಾಷಣೆ ಇರುವ ಸಿಡಿಯನ್ನು ಎಸಿಬಿ ಪೊಲೀಸರಿಗೆ ಕೊಟ್ಟಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ?

ಉತ್ತರಃ ಸುಳ್ಳು

ಪ್ರಶ್ನೆ:4 ಫ್ರಾಸಾ-1 ಇವರು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿದಾರರಾದ ಚಾಸಾ -4 ಮತ್ತು 5 ಇವರನ್ನು ಠಾಣೆಗೆ ಕರೆಸಿ, ಅವರಿಗೆ ಕೇಸಿನ ಬಗ್ಗೆ ತಿಳಿಸಿ, ತಾನು ಕೊಡಬೇಕಾಗಿದ್ದ ಹಣವನ್ನು ತನ್ನಿಂದ ಪಡೆದು, ಅದಕ್ಕೆ ಪೊಲೀಸರು ಫಿನಾಪ್ತಲೀನ್ ಪುಡಿಯನ್ನು ಹಚ್ಚಿದ್ದರು. ಆ ನೋಟುಗಳ ವಿವರಗಳನ್ನು ಚಾಸಾ-4 ಬರೆದುಕೊಂಡಿದ್ದರು. ರೆಕಾರ್ಡ ಆಗಿದ್ದ ಸಂಭಾಷಣೆಯ ಸಿಡಿ ಎಂಒ-1 ನ್ನು ಪೊಲೀಸರು ಪಂಚರಿಗೆ, ತಮಗೆ ಹಾಕಿ ಕೇಳಿಸಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು, ನಾನು ಯಾವುದೇ ಡಿಮ್ಯಾಂಡ್ ಮಾಡಿಲ್ಲ.

ಪ್ರಶ್ನೆ:5 ಫ್ರಾಸಾ-2 ಜಗದೀಶ್, ದ್ವಿದರ್ಜೆ ಸಹಾಯಕರು, ಕಾಪು ಪುರಸಭೆ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಾಃ 16-03-2019 ರಂದು ತಮ್ಮ ಮೇಲಾಧಿಕಾರಿಗಳ ಆದೇಶದಂತೆ, ಬೆಳಿಗ್ಗೆ 10.00 ಗಂಟೆಗೆ ಎ.ಸಿ.ಬಿ ಕಚೇರಿಯಲ್ಲಿ ತನಿಖಾಧಿಕಾರಿಗಳಾದ ಚಾಸಾ-20 ಇವರ ಮುಂದೆ ಹಾಜರಾಗಿದ್ದೆನು, ಅವರು ತಮಗೆ ಚಾಸಾ.1/ಫ್ರಾ.ಸಾ-1 ನ್ನು ಪರಿಚಯಿಸಿ, ಅವರು ಕೊಟ್ಟ ದೂರಿನ ಬಗ್ಗೆ ಹೇಳಿದ್ದರು ಹಾಗೂ ಚಾಸಾ-1 ತಂದಿದ್ದ ಡಿ.ವಿ.ಡಿ.ಯನ್ನು, ಅವರ ಲ್ಯಾಪ್ ಟಾಪ್‌ನಲ್ಲಿ ಹಾಕಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ತಮಗೆ ಕೇಳಿಸಿ, ಸದ್ರಿ ಸಂಭಾಷಣೆಯನ್ನು ಮೊಬೈಲ್‌ನಿಂದ ಕಂಪ್ಯೂಟರ್ ಮೂಲಕ ಸಿಡಿಗೆ ದಾಖಲಿಸಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸರಿ ಅಲ್ಲ

ಪ್ರಶ್ನೆ:6 ಫ್ರಾಸಾ 1 ಮತ್ತು 2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 1 ನೇ ಆರೋಪಿಗೆ ಕೊಡಬೇಕಾಗಿದ್ದ ರೂಪಾಯಿ 4 ಸಾವಿರ (2000 ರೂಪಾಯಿಯ ಎರಡು ನೋಟುಗಳು) ಹಣವನ್ನು ಫ್ರಾ.ಸಾ-1, ಚಾಸಾ-20 ಇವರ ಬಳಿಕೊಟ್ಟಿದ್ದರು. ಆ ನೋಟುಗಳ ಕ್ರಮ ಸಂಖ್ಯೆಯನ್ನು ಫ್ರಾ.ಸಾ-2 ಓದಿ ಹೇಳಿದ್ದರು, ಚಾಸಾ-5 ಬರೆದುಕೊಂಡಿದ್ದರು. ಆ

ನೋಟುಗಳಿಗೆ ಪೋಲಿಸರು ಪೌಡರ್ ಒಂದನ್ನು ಲೇಪಿಸಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸರಿ ಅಲ್ಲ

ಪ್ರಶ್ನೆಃ7 ಫ್ರಾಸಾ 1 ಮತ್ತು 2 ಇವರು ತಮ್ಮ ಸಾಕ್ಷಿ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಠಾಣೆಯಲ್ಲಿ ಪೊಲೀಸ್ ಸಿಬ್ಬಂದಿ ಶುದ್ಧವಾದ ನೀರಿಗೆ ಸೋಡಿಯಂ ಕಾರ್ಬೋನೇಟ್ ಪೌಡರನ್ನು ಸೇರಿಸಿ ಧ್ರಾವಣ ತಯಾರಿಸಿದ್ದರು. ಸದರಿ ಧ್ರಾವಣ ಬಣ್ಣ ರಹಿತವಾಗಿತ್ತು. ಮಾದರಿಗಾಗಿ ಸ್ವಲ್ಪ ಧ್ರಾವಣವನ್ನು ಚಿಕ್ಕ ಬಾಟಲಿಯಲ್ಲಿ ತುಂಬಿ, ಮುಚ್ಚಳ ಹಾಕಿ, “ವಿ” ಎನ್ನುವ ಅಕ್ಷರದ ಸೀಲು ಮಾಡಿ, ತಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿದರು. ಸದರಿ ಬಣ್ಣ ರಹಿತ ಧ್ರಾವಣದಲ್ಲಿ, ನೋಟುಗಳನ್ನು ಮುಟ್ಟಿದ್ದ ಫ್ರಾಸಾ-2 ಇವರ ಎರಡು ಕೈ ಬೆರಳುಗಳನ್ನು ಆ ಧ್ರಾವಣದಲ್ಲಿ ಅದ್ದಿಸಿದಾಗ, ಧ್ರಾವಣದ ಬಣ್ಣ ಗುಲಾಬಿ ಬಣ್ಣಕ್ಕೆ ತಿರುಗಿತು. ಗುಲಾಬಿ ಬಣ್ಣಕ್ಕೆ ತಿರುಗಿದ ಧ್ರಾವಣವನ್ನು ಪ್ರತ್ಯೇಕವಾಗಿ ಚಿಕ್ಕ ಬಾಟಲಿಯಲ್ಲಿ ತುಂಬಿ, ಮುಚ್ಚಳ ಹಾಕಿ, V ಎನ್ನುವ ಅಕ್ಷರದ ಸೀಲು ಮಾಡಿ, ತಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿದರು. ಸದರಿ ಬಾಟಲಿಗಳು ಎಂಒ-2 ಮತ್ತು 3 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸರಿ ಅಲ್ಲ

ಪ್ರಶ್ನೆಃ8 ಫ್ರಾಸಾ-1 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಪೊಲೀಸರ ಬಳಿಯಲ್ಲಿ ಇದ್ದ ಆಡಿಯೋ ರೆಕಾರ್ಡರನ್ನು ತನ್ನ ಜೇಬಿನಲ್ಲಿಟ್ಟು ಅದನ್ನು ಹೇಗೆ ಬಳಸಬೇಕೆಂದು ತೋರಿಸಿದ್ದರು ಮತ್ತು ಪೌಡರ್ ಹಚ್ಚಿದ್ದ ನೋಟುಗಳನ್ನು ತನ್ನ ಜೇಬಿನಲ್ಲಿಟ್ಟು, ಆ ಹಣವನ್ನು 1 ನೇ ಆರೋಪಿ ಕೇಳಿದಾಗ ಕೊಡಲು ಹೇಳಿದ್ದರು. ಈ ಬಗ್ಗೆ ನಿಪಿ-2 ರಂತೆ ಮಹಜರು ಮಾಡಿ ತನ್ನ ಹಾಗೂ ಪಂಚರ ಸಹಿ ಪಡೆದಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ:9 ಫ್ರಾಸಾ-1 ಮತ್ತು 2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ನಾವು, ಚಾಸಾ -5, ಚಾಸಾ-20 ಮತ್ತು ಸಿಬ್ಬಂದಿಗಳೊಂದಿಗೆ ಠಾಣೆಯಿಂದ ಹೊರಟು, ಆರೋಪಿತರ ಕಚೇರಿಗೆ ಹೋಗಿದ್ದೆವು, ಅಲ್ಲಿ ಚಾಸಾ-20, ಫ್ರಾಸಾ-1 ಇವರಿಗೆ ಕೆಲವು ಸೂಚನೆಗಳನ್ನು ಕೊಟ್ಟು, 1 ನೇ ಆರೋಪಿ ಲಂಚದ ಹಣ ಕೇಳಿದಾಗ, ಅದನ್ನು ಕೊಡಬೇಕೆಂದು, ಆತ ಹಣ ಪಡೆದ ನಂತರ ಸನ್ನೆ ಮಾಡಿ ತಿಳಿಸುವಂತೆ ಮತ್ತು ಫ್ರಾಸಾ-2 ಇವರಿಗೆ ಅಲ್ಲಿ ಆಗುತ್ತಿರುವುದನ್ನು ನೋಡಿಕೊಂಡು ತಿಳಿಸಲು ಹೇಳಿದ್ದರು. ಅದರಂತೆ ನಾವಿಬ್ಬರೂ, 1 ನೇ ಆರೋಪಿಯಾದ ನಿಮ್ಮ ಕಚೇರಿಗೆ ಹೋದಾಗ ನೀವು ಅಲ್ಲಿ ಇರಲಿಲ್ಲವೆಂದು, ನಂತರ ಪುನಃ 2.15 ಗಂಟೆಗೆ ಒಳಗೆ ಹೋದಾಗ, 1 ನೇ ಆರೋಪಿ ನೀವು ಇದ್ದು, ಆಗ ಫ್ರಾಸಾ-1, ನೀವು ಕೇಳಿದ್ದ ಹಣ ರೂಃ 4 ಸಾವಿರ ಕೊಟ್ಟಾಗ, ನೀವು ಅದನ್ನು ಲೆಕ್ಕ ಮಾಡಿ, ತೆಗೆದುಕೊಂಡು, ಫ್ರಾಸಾ-1 ಇವರಿಗೆ ಡಿ.ಡಿ ಬರುವುದಾಗಿ ತಿಳಿಸಿದ್ದೀರಿ, ನಂತರ ಹೊರಗೆ ಬಂದು, ಪೊಲೀಸರು ಹೇಳಿದಂತೆ ಫ್ರಾಸಾ-1 ಹಣೆಗೆ ಖರ್ಚಿಫ್ ನಿಂದ ಒರೆಸಿಕೊಂಡು ಸನ್ನೆ ಮಾಡಿ ತಿಳಿಸಿದ್ದರು, ಫ್ರಾಸಾ-2 ಸಹ ನಡೆದ ವಿಷಯದ ಬಗ್ಗೆ ಹೇಳಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸರಿ ಅಲ್ಲ

ಪ್ರಶ್ನೆ:10 ಫ್ರಾಸಾ-1 ಮತ್ತು 2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಚಾಸಾ-20, ಅವರ ಸಿಬ್ಬಂದಿಗಳು ಮತ್ತು ನಾವೆಲ್ಲರೂ ಆರೋಪಿಯ ಕೋಣೆಗೆ ಹೋಗಿ, ಚಾಸಾ-20 ರವರು, ಫ್ರಾಸಾ-1 ಕೊಟ್ಟ ದೂರಿನ ಬಗ್ಗೆ ಮಾಹಿತಿ ಕೊಟ್ಟು ತನಿಖೆಯಲ್ಲಿ ಸಹಕರಿಸುವಂತೆ ಸೂಚಿಸಿದ್ದರು ಹಾಗೂ ಫ್ರಾಸಾ-1, ಇವರಿಂದ ಪಡೆದಿದ್ದ ಲಂಚದ ಹಣದ ಬಗ್ಗೆ 1 ನೇ ಆರೋಪಿಯಾದ ನಿಮ್ಮನ್ನು ವಿಚಾರಿಸಿದಾಗ, ನೀವು ಹಣವನ್ನು 2 ನೇ ಆರೋಪಿಯ ಬಳಿ ಕೊಟ್ಟಿದ್ದೀರಿ ಎಂದು ಹೇಳಿದಾಗ, 2 ನೇ ಅರೋಪಿತನಾದ ನಿಮ್ಮನ್ನು ಚಾಸಾ-20 ಅಲ್ಲಿಗೆ ಅಲ್ಲಿಗೆ ಕರೆಯಿಸಿ ಹಣದ ಬಗ್ಗೆ ಕೇಳಿದಾಗ, ನೀವು ಅದನ್ನು

ಟ್ರಾನ್ಸಪೋರ್ಟ ಸೆಕ್ಷನ್ ನ ಕಪಾಟಿನಲ್ಲಿ ಇಟ್ಟಿರುವುದಾಗಿ ಹೇಳಿದ್ದೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ11 ಫ್ರಾಸಾ-1 ಮತ್ತು 2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಪೊಲೀಸರು ಅಲ್ಲಿ ಈ ಮೊದಲು ಠಾಣೆಯಲ್ಲಿ ತಯಾರಿಸಿದಂತೆ ಸೋಡಿಯಂ ಕಾರ್ಬೋನೇಟ್ ಪುಡಿ ಹಾಕಿ ಧ್ರಾವಣ ತಯಾರಿಸಿದ್ದರು. ಸದರಿ ಧ್ರಾವಣ ಬಣ್ಣ ರಹಿತವಾಗಿತ್ತು. ಅದರಿಂದ ಸ್ವಲ್ಪ ಭಾಗವನ್ನು ಮಾದರಿಗಾಗಿ ಬಾಟಲಿಗೆ ಹಾಕಿ, ಸೀಲು ಮಾಡಿ ಸಂಗ್ರಹಿಸಿದ್ದರು. ನಂತರ ಉಳಿದ ಧ್ರಾವಣದಲ್ಲಿ ಎರಡು ಭಾಗ ಮಾಡಿ, ಒಂದು ಬಟ್ಟಲಿನ ಧ್ರಾವಣದಲ್ಲಿ 1 ನೇ ಆರೋಪಿಯ ಬಲಗೈಯ ಬೆರಳು, ಇನ್ನೊಂದು ಬಟ್ಟಲಿನಲ್ಲಿ ಎಡಗೈ ಬೆರಳನ್ನು ತೊಳೆದಾಗ, ಆಗ ಧ್ರಾವಣದ ಬಣ್ಣ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಸದರಿ ಗುಲಾಬಿ ಬಣ್ಣಕ್ಕೆ ತಿರುಗಿದ ಧ್ರಾವಣವನ್ನು ಪ್ರತ್ಯೇಕವಾಗಿ ಬಾಟಲಿಯಲ್ಲಿ ಹಾಕಿ, V ಎನ್ನುವ ಅಕ್ಷರದ ಸೀಲು ಮಾಡಿ, ತಮ್ಮ ಸಹಿ ಇರುವ ಚೀಟಿ ಅಂಟಿಸಿದ್ದರು. ಸದರಿ ಬಾಟಲಿಗಳು ಎಂಒ-4 ರಿಂದ 6 ಆಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸರಿ ಅಲ್ಲ

ಪ್ರಶ್ನೆಃ12 ಫ್ರಾಸಾ-1 ಮತ್ತು 2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ 2 ನೇ ಆರೋಪಿ, ನೀವು 1 ನೇ ಆರೋಪಿ ಕೊಟ್ಟ ಹಣವನ್ನು ಇಟ್ಟ ಜಾಗೆಯನ್ನು ತೋರಿಸಿದ್ದು, ಅಲ್ಲಿ ಮರದ ಕಪಾಟಿನಲ್ಲಿದ್ದ ಒಂದು ಕಡತದಲ್ಲಿ ಬಿಳಿ ಪೇಪರ್ ನಲ್ಲಿದ್ದ ಹಣವನ್ನು ನೀವು ಹಾಜರುಪಡಿಸಿದ್ದು, ಸದರಿ ಹಣವನ್ನು ಚಾಸಾ-20 ತೆಗೆದುಕೊಂಡು ನೋಡಿದಾಗ ಅದು ಮೊದಲು ಬರೆದಿದ್ದ ನೋಟಿನ ಸಂಖ್ಯೆಗಳಿಗೆ ತಾಳೆಯಾಗಿತ್ತು. ಸದರಿ ಹಣವನ್ನು ಸಹ ಜಪ್ತು ಮಾಡಿದ್ದರು. ಅದೇ ಕಪಾಟಿನಲ್ಲಿ ಕಡತಗಳ ಮಧ್ಯೆ ಇದ್ದ ರೂಃ 30,670.00

ಹಣವನ್ನು ಸಹ ಹಾಜರುಪಡಿಸಿದ್ದು, ಸದರಿ ಹಣವನ್ನು ಸಹ ಜಪ್ತು ಮಾಡಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಆ ಹಣ 2 ನೇ ಆರೋಪಿಯ ಸ್ವಂತ ಹಣ

ಪ್ರಶ್ನೆಃ 13 ಫ್ರಾಸಾ-1 ಮತ್ತು 2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ 1 ನೇ ಆರೋಪಿಯ ಕೋಣೆಯಲ್ಲಿ, ನಿಮ್ಮ ಸಹೋದ್ಯೋಗಿಯಾಗಿದ್ದ ಚಾಸಾ -3 ರಾಮಕೃಷ್ಣ ರೈ ಇವರನ್ನು ತನಿಖಾಧಿಕಾರಿ ಕರೆಯಿಸಿ, ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಕೇಳಿಸಿದ್ದು, ಅದರಲ್ಲಿದ್ದ ನಿಮ್ಮ ಧ್ವನಿಗಳನ್ನು ಗುರುತಿಸಿದ್ದರು. ನಂತರ ವಾಯ್ಸ್ ರೆಕಾರ್ಡರ್ ನ್ನು ಲ್ಯಾಪ್ ಟಾಪ್ ಗೆ ಸಂಪರ್ಕಿಸಿ, ಅದರಲ್ಲಿದ್ದ ಸಂಭಾಷಣೆಯನ್ನು ಸಿಡಿಗೆ ವರ್ಗಾಯಿಸಿದ್ದರು. ನಂತರ ನಿಮ್ಮನ್ನು ವಿಚಾರಿಸಿ ಅವರ ಹೇಳಿಕೆ ಪಡೆದಿದ್ದರು ಹಾಗೂ ಫ್ರಾಸಾ-1 ಈತನಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಹ ಜಪ್ತು ಮಾಡಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸರಿ ಅಲ್ಲ

ಪ್ರಶ್ನೆಃ14 ಫ್ರಾಸಾ-1 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಆದಿನ 1 ನೇ ಆರೋಪಿ ಇದ್ದ ಕೋಣೆಯ ಸಿಸಿ ಟಿವಿಯ ರೆಕಾರ್ಡಿಂಗ್ ನ್ನು ಸಹ ಆದಿನ ಪೊಲೀಸರು ಪಡೆದಿದ್ದರು ಮತ್ತು 2 ನೇ ಆರೋಪಿ ತಾನು ಕೊಟ್ಟ ಹಣವನ್ನು ಇನ್ನೊಂದು ಕೋಣೆಗೆ ತೆಗೆದುಕೊಂಡು ಹೋಗಿದ್ದ ಬಗ್ಗೆ ಇದ್ದ ಸಿಸಿ ಟಿವಿಯ ಫೂಟೇಜ್‌ನ್ನು, 1 ನೇ ಆರೋಪಿಯ ಕಚೇರಿಯ ಸಿಬ್ಬಂದಿ ಚಾಸಾ-6 ಇವರಿಂದ ಪಡೆದಿದ್ದರು ಹಾಗೂ ಹಣ ಇಟ್ಟ ಜಾಗೆಯನ್ನು ಹತ್ತಿಯಿಂದ ಒರೆಸಿ, ಸದರಿ ಹತ್ತಿಯನ್ನು ಸಹ ಜಪ್ತು ಮಾಡಿದ್ದರು. ಈ ಬಗ್ಗೆ ಸ್ಥಳದಲ್ಲಿ ನಿಪಿ-4 ರಂತೆ ಮಹಜರು ಮಾಡಿ, ನಿಪಿ-5 ಮತ್ತು 6 ರಂತೆ ಫೋಟೋಗಳನ್ನು ತೆಗೆದಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸರಿ ಅಲ್ಲ

ಪ್ರಶ್ನೆಃ15 ಫ್ರಾಸಾ-2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 1 ನೇ ಆರೋಪಿಯಾದ ನಿಮ್ಮ ಕೋಣೆಯಲ್ಲಿದ್ದ ಸಿಸಿ ಟಿವಿ ದ್ರಶ್ಯಾವಳಿಗಳನ್ನು ಚಾಸಾ-

20 ತೆಗೆಸಿ ನೋಡಿದಾಗ, ಅದರಲ್ಲಿ ನೀವು 1 ನೇ ಆರೋಪಿ ಹಣ ಪಡೆದ ಬಗ್ಗೆ ದ್ರಶ್ಯಾವಳಿ ಇತ್ತು. ಅದನ್ನು ಚಾಸಾ-20 ಲ್ಯಾಪ್ ಟಾಪ್ ಮೂಲಕ ಪೆನ್ ಡ್ರೈವ್ ಗೆ ಹಾಕಿ, ಅದನ್ನು ಸೀಲು ಮಾಡಿ ಜಪ್ತು ಮಾಡಿದ್ದರು ಹಾಗೂ 1 ನೇ ಆರೋಪಿಯ ಕಚೇರಿಯ ಡಿ.ವಿ.ಆರ್ ಎಂಒ-12 ನ್ನು ಸಹ ಜಪ್ತು ಮಾಡಿದ್ದರು ಹಾಗೂ ಚಾಸಾ-1 ಹಣ ಇಟ್ಟ ಜಾಗೆಯನ್ನು ಹತ್ತಿಯಿಂದ ಒರೆಸಿ, ಸದರಿ ಹತ್ತಿಯನ್ನು ಸಹ ಜಪ್ತು ಮಾಡಿದ್ದರು. ಆ ಬಗ್ಗೆ ಸ್ಥಳದಲ್ಲಿ ನಿಪಿ-4 ರಂತೆ ಮಹಜರು ಹಾಗೂ ಫೋಟೋಗಳನ್ನು ಸಹ ತೆಗೆದಿದ್ದರು. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ, ಠಾಣೆಗೆ ಕರೆದುಕೊಂಡು ಬಂದಿದ್ದರು ಹಾಗೂ ಪಂಚನಾಮೆ ಸಮಯ ಬಳಸಿದ್ದ V ಅಕ್ಷರದ ಸೀಲಿನ ಮಾದರಿಯನ್ನು ತನಗೆ ನೀಡಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಹೌದು ಅದರಲ್ಲಿ ಆಪಾದಿತ ದ್ರಶ್ಯಗಳು ಇಲ್ಲ

ಪ್ರಶ್ನೆ:16 ಫ್ರಾಸಾ-2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 06-05-2019 ರಂದು ಪೊಲೀಸರು ತನ್ನನ್ನು ಹಾಗೂ ಚಾಸಾ-5 ಇವರನ್ನು ಎಸಿಬಿ ಕಚೇರಿಗೆ ಕರೆಯಿಸಿದ್ದರು, ಠಾಣೆಯಲ್ಲಿ ಪ್ರಿ ಟ್ರ್ಯಾಪ್ ಮತ್ತು ಟ್ರ್ಯಾಪ್ ಸಮಯದ 1 ನೇ ಆರೋಪಿಯಾದ ನಿಮ್ಮ ಸಂಭಾಷಣೆಯ ಮಾತುಗಳನ್ನು ಬೆರಳಚ್ಚು ಮಾಡಿದ್ದರು, ಸದರಿ ದಾಖಲೆ ನಿಪಿ-11 ಆಗಿದ್ದು, ಅದಕ್ಕೆ ತಾನು ಮತ್ತು ಚಾಸಾ-5 ಸಹಿ ಮಾಡಿದ್ದೆವು. ಆ ಸಂಭಾಷಣೆ ಇರುವ ದಾಖಲೆ ನಿಪಿ-11 ನ್ನು 1 ನೇ ಆರೋಪಿಗೆ ಕೊಟ್ಟು, ಅವರಿಂದ 6 ಬಾರಿ ಹೇಳಿಸಿ, ತನಿಖಾಧಿಕಾರಿ ಅದನ್ನು ವಾಯ್ಸು ರೆಕಾರ್ಡರ್ ನಲ್ಲಿ ದಾಖಲಿಸಿ, ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿದ್ದರು. ಅದಕ್ಕಾಗಿ ಮಾಡಿದ ಮಹಜರು ನಿಪಿ-12 ಹಾಗೂ ಆಗ ತೆಗೆದ ಫೋಟೋಗಳು ನಿಪಿ-13. ದಿನಾಂಕ 20.06-2019 ರಂದು ಪೊಲೀಸ್ ಸಿಬ್ಬಂದಿ ಮತ್ತು ಚಾಸಾ-11 ಇವರೊಂದಿಗೆ 1 ನೇ ಆರೋಪಿಯ ಕಚೇರಿಗೆ ಹೋಗಿ, ಅಲ್ಲಿ 1 ನೀವು ಕುಳಿತುಕೊಳ್ಳುವ ಜಾಗೆಯ ನಕಾಶೆಯನ್ನು ನಿಪಿ-22 ರಂತೆ ಬರೆದು, ನಿಪಿ.23 ರಂತೆ

ಫೋಟೋ ತೆಗೆದಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸರಿ ಅಲ್ಲ

ಪ್ರಶ್ನೆ:17 ಫ್ರಾಸಾ-3 ರಾಮಕೃಷ್ಣ ರೈ, ಆರ್.ಟಿ.ಓ, ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ 1 ನೇ ಅರೋಪಿಯಾದ ನೀವು ಅವರ ಮೇಲಾಧಿಕಾರಿಯಾಗಿದ್ದು, 2 ನೇ ಆರೋಪಿಯಾದ ನೀವು ಹೊರಗುತ್ತಿಗೆ ಆಧಾರದಿಂದ ಕೆಲಸ ಮಾಡುತ್ತಿದ್ದೀರೆಂದು, ದಿನಾಂಕ 16-03-2019 ರಂದು ಚಾಸಾ-20 ಮಧ್ಯಾಹ್ನ 3 ಗಂಟೆ ಸಮಯಕ್ಕೆ 1 ನೇ ಅರೋಪಿಯ ಕೋಣೆಗೆ ಕರೆಸಿದ್ದರು, ಅಲ್ಲಿ 1 ಮತ್ತು 2 ನೇ ಆರೋಪಿತರನ್ನು ಕೂರಿಸಿದ್ದರು ಮತ್ತು 1 ನೇ ಆರೋಪಿ ಆದಿನ ಚಾಸಾ-1 ಈತನ ಕಾರಿನ ತೆರಿಗೆ ಮರುಪಾವತಿಗೆ ಸಂಬಂಧಿಸಿದಂತೆ ರೂಃ 4 ಸಾವಿರಗಳ ಲಂಚ ಪಡೆದಿದ್ದರು ಎಂದು ತಿಳಿದಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸರಿ ಅಲ್ಲ

ಪ್ರಶ್ನೆ:18 ಫ್ರಾಸಾ-4 ಸಚಿನ್, ಟೆಕ್ನಿಕಲ್ ಕನ್ಸಲ್ಟೆಂಟ್, ಆರ್.ಟಿ.ಓ., ಕಚೇರಿ, ಉಡುಪಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 16-03-2019 ರಂದು ಚಾ.ಸಾ-3 ತನಗೆ ಫೋನ್ ಮಾಡಿ ಆರ್.ಟಿ.ಓ ಕಚೇರಿಗೆ ಬರಲು ಹೇಳಿದಂತೆ ತಾನು 3.30 ಗಂಟೆಗೆ ಹೋಗಿದ್ದೆ, ಅಲ್ಲಿ 1 ನೇ ಆರೋಪಿಯ ಕಚೇರಿಯಲ್ಲಿ ಚಾಸಾ-3, ತನಿಖಾಧಿಕಾರಿ ಚಾಸಾ-20 ಸಹ ಇದ್ದರು, ಅವರು ತನಗೆ 1 ನೇ ಆರೋಪಿಯ ಕ್ಯಾಬೀನ್ ನ ಡಿ.ವಿ.ಆರ್.ನಲ್ಲಿಯ 2.10 ರಿಂದ 2.22 ರವರೆಗಿನ ದ್ರಶ್ಯಾವಳಿಗಳನ್ನು ತೋರಿಸಲು ಹೇಳಿದಂತೆ ತಾನು ತೆಗೆದು ತೋರಿಸಿದ್ದೆ. ಸದರಿ ದ್ರಶ್ಯಾವಳಿಗಳನ್ನು ಚಾಸಾ-20 ಇವರ ಸೂಚನೆಯಂತೆ ಪೆನ್ ಡ್ರೈವ್ ಗೆ ಹಾಕಿ ಕೊಟ್ಟಿದ್ದೆ ಹಾಗೂ ಡಿ.ವಿಆರ್ ನ್ನು ಸಹ ಕೊಟ್ಟಿದ್ದೆ. ಅದಕ್ಕಾಗಿ

ಸಾಕ್ಷ್ಯ ಅಧಿನಿಯಮ ಕಲಂ 65 ರ ಪ್ರಮಾಣ ಪತ್ರ ನಿಪಿ-25 ನ್ನು ಸಹ ಕೊಟ್ಟಿದ್ದೆ. ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಆಪಾದಿತ ದ್ರಶ್ಯಾವಳಿಗಳು ಅದರಲ್ಲಿ ಇಲ್ಲ

ಪ್ರಶ್ನೆಃ19 ಫ್ರಾಸಾ-6 ಜೆ.ಪಿ. ಗಂಗಾಧರ, ಪ್ರಾದೇಶಿಕ ಅಧಿಕಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಎ.ಸಿ.ಬಿ. ಪೊಲೀಸರು ದಿನಾಂಕ 24-05-2019 ರಂದು ಕೋರಿಕೆಯನ್ನು ನೀಡಿ, 1 ನೇ ಆರೋಪಿ ದಿನಾಂಕ 05-07-2019 ರಿಂದ ಆದಿನದವರೆಗೆ ಸಹಾಯಕ ಪ್ರಾದೇಶಿಕ ಅಧಿಕಾರಿಯಾಗಿ ಮಂಗಳೂರಿನ ಕಚೇರಿಯಲ್ಲಿ ಸೇವೆ ಸಲ್ಲಿಸಿದ್ದ ಬಗ್ಗೆ ನಿಶಾನೆ ಪಿ-27 ರಂತೆ ದಾಖಲೆ ನೀಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸರಿ ಅಲ್ಲ

ಪ್ರಶ್ನೆಃ20 ಫ್ರಾ.ಸಾ.7 ಸುಗಣ, ಪೋಸ್ಟ ಮಾಸ್ಟರ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಎಸಿಬಿ ಪೊಲೀಸರು ದಿನಾಂಕ 08-05-2019 ರ ಕೋರಿಕೆಯಂತೆ ತನಿಖೆಯ ಸಮಯದಲ್ಲಿ ಜಪ್ತು ಮಾಡಿದ್ದ ಪತ್ರ ನೊಂದಾಯಿತ ಅಂಚೆ ಮೂಲಕ ಬಂದ ಬಗ್ಗೆ ವಿವರ ಕೋರಿದ್ದರು, ಅದರಂತೆ ನಿಪಿ-29 ರಂತೆ ಮಾಹಿತಿಯನ್ನು ತನ್ನಪತ್ರದೊಂದಿಗೆ ನೀಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ21 ಫ್ರಾಸಾ-8, ಪ್ರಸನ್ನ ದೇವಾಡಿಗ, ಪಿ.ಸಿ. 1242, ಲೋಕಾಯುಕ್ತ ಪೊಲೀಸ್ ಠಾಣೆ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ 16-03-2019 ರಂದು ಚಾಸಾ.1 ಕೊಟ್ಟ ದೂರಿನಂತೆ, ತನಿಖಾಧಿಕಾರಿ ಸೂಚಿಸಿದಂತೆ, ಚಾಸಾ-4 ಮತ್ತು 5 ಇವರ ಸಮಕ್ಷಮ ಫ್ರಾಯೋಗಿಕ ಪಂಚನಾಮೆ ನಿ.ಪಿ.2 ನ್ನು ಕಂಪ್ಯೂಟರ್ ನಲ್ಲಿ ದಾಖಲಿಸಿದ್ದೆ ಹಾಗೂ ಸೋಡಿಯಂ ಕಾರ್ಬೋನೇಟ್ ಧ್ರಾವಣವನ್ನು ಠಾಣೆಯಲ್ಲಿ ಹಾಗೂ ಟ್ರ್ಯಾಪ್ ಸಮಯದಲ್ಲಿ ತಯಾರಿಸಿದ್ದೆ. ಆ ಸಮಯ ಚಾಸಾ-1 ಹಾಜರುಪಡಿಸಿದ್ದ ವಾಯ್ಸು ರೆಕಾರ್ಡರ್ ನಲ್ಲಿ ಇದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ ಎಂಓ-19 ರ ಸಿ.ಡಿಗೆ

ವರ್ಗಾಯಿಸಿದ್ದೆ, ಅದಕ್ಕಾಗಿ ನಿಪಿ-31 ರಂತೆ ಕಲಂ 65(ಬಿ)ರ ಪ್ರಮಾಣ ಪತ್ರ ನೀಡಿದ್ದೆ ಮತ್ತು ಆ ಸಮಯ ತಯಾರಿಸಿದ ಪಂಚನಾಮೆ ನಿಪಿ-4 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:22 ಪ್ರಾ.ಸಾ-8 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿಃ 06-05-2019 ರಂದು ತನಿಖಾಧಿಕಾರಿಗಳು ಪಂಚರ ಸಮಕ್ಷಮ 1 ನೇ ಅರೋಪಿಯ ಮಾದರಿ ಕೋರಿಕೆ ಧ್ವನಿ ಹಾಗೂ ದಿನಾಂಕ 17-05-2019 ರಂದು 2 ನೆ ಆರೋಪಿಯ ಮಾದರಿ ಕೋರಿಕೆ ಧ್ವನಿಯನ್ನು ಸಂಗ್ರಹಿಸಿದ್ದು, ಆ ಬಗ್ಗೆ ತಯಾರಿಸಿದ ಮಹಜರು ನಿಪಿ-12 ಮತ್ತು 17, ಆ ಸಮಯ ತಾನು ತೆಗೆದಿದ್ದ ಪೋಟೋಗಳು ನಿಪಿ-13 ಮತ್ತು ನಿಪಿ-19, ಅದಕ್ಕಾಗಿ ಕೊಟ್ಟ ಪ್ರಮಾಣ ಪತ್ರ ನಿಪಿ-32 ಮತ್ತು 33 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:23 ಪ್ರಾಸಾ.9 ರಾಘವೇಂದ್ರ ಪೂಜಾರಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 01-07-2021 ರಂದು ಎಸಿಬಿ ಪೊಲೀಸರು ತಂದು ಕೊಟ್ಟ ಪೆನ್ ಡ್ರೈವ್ ನಲ್ಲಿದ್ದ ಪೋಟೋಗಳನ್ನು ಪ್ರಿಂಟ್ ಮಾಡಿಸಿ ಕೊಟ್ಟಿದ್ದೆ. ಅದಕ್ಕಾಗಿ ನಿ.ಪಿ.34 ರಂತೆ ಪ್ರಮಾಣ ಪತ್ರವನ್ನು ಸಹ ನೀಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:24 ಪ್ರಾಸಾ -13 ಮಂಜುನಾಥ ಕವರಿ, ಪೊಲೀಸ್ ಉಪಾಧೀಕ್ಷಕರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 16-03-2019 ರಂದು ಚಾಸಾ-1 ಹಾಜರಾಗಿ ಕೊಟ್ಟ ಲಿಖಿತ ದೂರು ನಿಪಿ-1 ಮತ್ತು ಒಂದು ಡಿವಿಡಿಯನ್ನು ಹಾಜರುಪಡಿಸಿದ್ದು, ದೂರು ನಿಪಿ-1 ನ್ನು ಸ್ವೀಕರಿಸಿ, ಅದನ್ನು ಠಾಣಾ ಗುನ್ನಾ ಸಂಖ್ಯೆ 3/2019 ಕ್ಕೆ ದಾಖಲಿಸಿಕೊಂಡು, ನಿಪಿ-40 ರಂತೆ ಪ್ರಥಮ ವರ್ತಮಾನ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಅದೇ ದಿನ ಕಾಪು ಪುರಸಭೆಯ ಮುಖ್ಯಾಧಿಕಾರಿಯವರಿಗೆ ಪಂಚರನ್ನು ಕಳುಹಿಸುವಂತೆ ಕೋರಿಕೆ ನೀಡಿದ್ದು, ಅದರಂತೆ ಚಾಸಾ-4 ಮತ್ತು 5 ಇವರು ನನ್ನ ಮುಂದೆ ಬೆಳಿಗ್ಗೆ 10 ಗಂಟೆಗೆ ಹಾಜರಾಗಿದ್ದರು. ಅವರಿಗೆ ಚಾಸಾ-1 ಮತ್ತು ಅವರು ನೀಡಿದ ದೂರಿನ ಬಗ್ಗೆ ಮಾಹಿತಿ ನೀಡಿ, ಮಾಡಬೇಕಾದ ತನಿಖೆಯ ಬಗ್ಗೆ ತಿಳಿಸಿದ್ದೆ ಹಾಗೂ ಎಂಒ-1 ರಲ್ಲಿಯ ಸಂಭಾಷಣೆಯನ್ನು ಸಹ ಕೇಳಿಸಿದ್ದೆ, ಸದರಿ ಸಂಭಾಷಣೆಯಲ್ಲಿ ಲಂಚದ ಬೇಡಿಕೆ ಇತ್ತು ಮತ್ತು ಆ ಸಂಭಾಷಣೆಯಲ್ಲಿದ್ದ ಚಾಸಾ-1 ಈತನ ಧ್ವನಿಯನ್ನು ಗುರುತಿಸಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ25 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಚಾಸಾ-1, ಆರೋಪಿಗೆ ಕೊಡಲು ತಂದಿದ್ದ ರೂಪ್ಯಾ 2 ಸಾವಿರ ಮುಖಬೆಲೆಯ 2 ನೋಟುಗಳನ್ನು ಹಾಜರುಪಡಿಸಿದ್ದು, ಆ ನೋಟುಗಳ ಕ್ರಮ ಸಂಖ್ಯೆಗಳನ್ನು ಚಾಸಾ-4 ಹೇಳಿದ್ದು, ಚಾಸಾ-5 ಬರೆದುಕೊಂಡಿದ್ದರು. ಆ ಸಮಯದಲ್ಲಿ ತಯಾರಿಸಿದ ದಾಖಲೆ ನಿಶಾನೆ ಪಿ-7, ಆ ನೋಟುಗಳನ್ನು ಮುಂದಿನ ತನಿಖೆಗಾಗಿ ಬಳಸಿಕೊಂಡಿದ್ದೆ. ಸದರಿ ನೋಟುಗಳನ್ನು ಚಾಸಾ-4, ಚಾಸಾ -1 ಈತನ ಜೇಬಿನಲ್ಲಿ ಇಟ್ಟಿದ್ದರು ಹಾಗೂ ಸದರಿ ಹಣ ಎಂಒ-10, ಆ ಹಣವನ್ನು 1 ನೇ ಆರೋಪಿಗೆ ನೀಡಿದ ನಂತರ, ತಮಗೆ ಮುಖ ಒರೆಸಿಕೊಂಡು ಸನ್ನೆ ಮಾಡುವಂತೆ ಸೂಚನೆಯನ್ನು ಸಹ ಕೊಟ್ಟಿದ್ದೆ ಹಾಗೂ ಚಾಸಾ-1 ಇವರೊಂದಿಗೆ ಚಾಸಾ-4 ಇವರನ್ನು ಕಳುಹಿಸಿ ಕೊಟ್ಟು, ನಡೆಯುವ ಘಟನೆಗಳನ್ನು ಗಮನಿಸಬೇಕೆಂದು ಹೇಳಿ ಕಳುಹಿಸಿದ್ದೆ ಹಾಗೂ ಚಾಸಾ -1 ಈತನಿಗೆ ವಾಯ್ಸ್ ರೆಕಾರ್ಡರನ್ನು ಕೊಟ್ಟು, ಅದನ್ನು ಯಾವ ರೀತಿಯಲ್ಲಿ ಆಪರೇಟ್ ಮಾಡಬೇಕೆಂದು ತಿಳಿಸಿ ಹೇಳಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ26 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ಮಧ್ಯಾಹ್ನ 11.45ರ ಸಮಯದಲ್ಲಿ ಠಾಣೆಯಿಂದ ಎರಡು ಕಾರು, ಒಂದು ಜೀಪಿನಲ್ಲಿ 1 ನೇ ಆರೋಪಿಯ ಕಚೇರಿಗೆ ಒಟ್ಟಿಗೆ ಹೊರಟು, ಅಲ್ಲಿಗೆ ತಲುಪಿದಾಗ ಸಮಯ ಮಧ್ಯಾಹ್ನ 12.15 ಗಂಟೆ ಆಗಿತ್ತು, ಅಲ್ಲಿ ಚಾಸಾ-1 ಮತ್ತು 4 ಇವರಿಗೆ ಪುನಃ ಸೂಚನೆಗಳನ್ನು ಕೊಟ್ಟು ಅವರನ್ನು ಮುಂದೆ ಕಳುಹಿಸಿ, ನಾವು ಹಿಂಬಾಲಿಸಿಕೊಂಡು ಹೋಗಿ, ಡಿಸಿ ಕಚೇರಿಯ ಆವರಣದಲ್ಲಿದ್ದಾಗ, ಚಾಸಾ-1, ಮಧ್ಯಾಹ್ನ 2 ಗಂಟೆಯ ಸಮಯಕ್ಕೆ ಸನ್ನೆ ಮಾಡಿ ಸೂಚನೆ ನೀಡಿದಾಗ, ನಾನು, ಚಾಸಾ-5, ಸಿಬ್ಬಂದಿಗಳೊಂದಿಗೆ 1 ನೇ ಆರೋಪಿಯ ಕಚೇರಿಯ ಒಳಗೆ ಹೋದಾಗ, ಅಲ್ಲಿ ಚಾಸಾ-1, 1 ನೇ ಆರೋಪಿಗೆ ಹಣ ಕೊಟ್ಟಿದ್ದಾಗಿ ಹೇಳಿದಾಗ,ಆ ಬಗ್ಗೆ 1 ನೇ ಆರೋಪಿಯನ್ನು ತಾನು ವಿಚಾರಿಸಿದಾಗ, ನೀವು ಹಣ ಪಡೆದ ಬಗ್ಗೆ ಒಪ್ಪಿ, ಆ ಹಣವನ್ನು 2 ನೇ ಆರೋಪಿಯ ಬಳಿ ಕೊಟ್ಟಿರುವುದಾಗಿ ಹೇಳಿದ್ದರಿಂದ, ಅದಕ್ಕಾಗಿ ಸಿಬ್ಬಂದಿಗಳ ಮೂಲಕ 2 ನೇ ಆರೋಪಿಯನ್ನು ಕರೆಸಿಕೊಂಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ27 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 2 ನೇ ಆರೋಪಿಯ ಬಳಿ ಹಣದ ಬಗ್ಗೆ ವಿಚಾರಿಸಿದಾಗ, ಆ ಹಣವನ್ನು ಅದೇ ಕಚೇರಿಯ ಸಾರಿಗೆ ವಿಭಾಗದ ಮರದ ಕಪಾಟಿನಲ್ಲಿ ಇಟ್ಟಿರುವುದಾಗಿ ಹೇಳಿದ್ದರು. ಸದರಿ ಹಣವನ್ನು ಸಿಬ್ಬಂದಿಗಳನ್ನು ಕಳುಹಿಸಿ 2 ನೇ ಆರೋಪಿಯಿಂದ ತರಿಸಿಕೊಂಡಿದ್ದೆ. ಆಹಣ ಒಂದು ಕಾಗದದಲ್ಲಿ ಮಡಚಿ ಇಟ್ಟಿತ್ತು. ಆ ಹಣವನ್ನು ಹಾಜರುಪಡಿಸಿದಾಗ, ಅದೇ ಕಪಾಟಿನಲ್ಲಿದ್ದ 36,670/- ರೂಪಾಯಿಗಳ ಹಣವನ್ನು, 1 ನೇ ಅರೋಪಿಯಾದ ನೀವು 2 ನೇ ಆರೋಪಿಯ ಬಳಿ ಕೊಟ್ಟಿದಾಗಿ ಹೇಳಿದ್ದು, ಸದರಿ ಹಣವನ್ನು ಸಹ

ಅಲ್ಲಿಯೇ ಜಪ್ತು ಮಾಡಲಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸರಿ ಅಲ್ಲ

ಪ್ರಶ್ನೆ:28 ಫ್ರಾಸಾ-13 ಇವರು ತಮ್ಮ ಮುಂದುವರಿದ ವಿಚಾರಣೆಯಲ್ಲಿ ನಂತರ ನಿಮ್ಮ ತಪಾಸಣೆಗಾಗಿ ಪ್ರತ್ಯೇಕವಾದ ಎರಡು ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಭಟ್ಟೀಕರಿಸಿದ ನೀರಿನೊಂದಿಗೆ ಮಿಶ್ರಣ ಮಾಡಿ, ದ್ರಾವಣ ತಯಾರಿಸಿದಾಗ, ಸದರಿ ದ್ರಾವಣ ಬಣ್ಣರಹಿತವಾಗಿತ್ತು. ಅದರ ಮಾದರಿಯನ್ನು ಒಂದು ಬಾಟಲಿಯಲ್ಲಿ ಹಾಕಿ ತೆಗೆದುಕೊಂಡಿದ್ದೆ. ನಂತರ ಉಳಿದ ಎರಡು ಬಟ್ಟಲಿನ ದ್ರಾವಣದಲ್ಲಿ 1 ನೇ ಆರೋಪಿಯಾದ ನಿಮ್ಮ ಎಡಕೈ ಮತ್ತು ಬಲಕೈನ್ನು ಪ್ರತ್ಯೇಕವಾಗಿ ಅದ್ದಿಸಿದಾಗ, ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ಬಾಟಲಿಯಲ್ಲಿ ಹಾಕಿ, V ಎನ್ನುವ ಅಕ್ಷರದ ಸೀಲು ಮಾಡಿ, ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿತ್ತು. ಸದರಿ ಬಾಟಲಿ ಎಂಒ-4 ರಿಂದ 6 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:29 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ 1 ನೇ ಆರೋಪಿಯ ಕಚೇರಿಯಲ್ಲಿದ್ದ ಸಿಸಿ ಟಿವಿ ದ್ರಶ್ಯಾವಳಿಗಳನ್ನು ತಪಾಸು ಮಾಡಿ ಸಂಗ್ರಹಿಸಿದ್ದೆ. ಅದಕ್ಕಾಗಿ ಚಾಸಾ-6 ಇವರನ್ನು ಕರೆಯಿಸಿಕೊಂಡು, ದ್ರಶ್ಯಾವಳಿಗಳನ್ನು ನೋಡಿ, ಆ ದ್ರಶ್ಯಾವಳಿಗಳನ್ನು ಪೆನ್ ಡ್ರೈವ್ ಗೆ ವರ್ಗಾಯಿಸಿ, ಸಿಡಿಗೆ ದಾಖಲಿಸಿದ್ದೆ. ಸದರಿ ಪೆನ್ ಡ್ರೈವ್ ಎಂಒ-11 ಹಾಗೂ ಸಿಡಿ ಎಂಒ-18 ಹಾಗೂ ಚಾಸಾ-6 ಇವರ ಮೂಲಕ ಸಿಸಿ ಟಿವಿಯ ಡಿ.ವಿ.ಆರ್ ನ್ನು ಸಹ ಜಪ್ತು ಮಾಡಿದ್ದೆ. ಸದರಿ ಡಿ.ವಿ.ಆರ್ ಎಂಒ-12 ಆಗಿದೆ. ಆ ಸಮಯ ತಯಾರಿಸಿದ ಪಂಚನಾಮೆ ನಿಶಾನೆ ನೆ ಪಿ-4 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:30 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ನಿಪಿ-4 ರ ಸಮಯದಲ್ಲಿ ಚಾಸಾ-1 ಈತನಿಗೆ ಸಂಬಂಧಪಟ್ಟ ವಾಹನದ ದಾಖಲೆ ನಿಪಿ-3 ನ್ನು ಅಮಾನತುಪಡಿಸಿಕೊಂಡೆ, ಆ ಸಮಯ ತೆಗೆದ 30 ಫೋಟೋಗಳು ನಿಶಾನೆ ಪಿ-6 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ:31 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಚಾಸಾ-1 ಅವರ ಬಳಿ ಇದ್ದ ವಾಯ್ಸು ರೆಕಾರ್ಡರನಲ್ಲಿದ್ದ ಸಂಭಾಷಣೆಯನ್ನು ಅಲ್ಲಿಯೇ 1 ನೇ ಅರೋಪಿಯ ಕಚೇರಿಯಲ್ಲಿ ಕೇಳಿಸಿದಾಗ ಅದನ್ನು ಚಾಸಾ-3 ಗುರುತಿಸಿದ್ದರು. ನಂತರ ಆರೋಪಿತರಾದ ನಿಮ್ಮ ಮೇಲೆ ದಸ್ತಗಿರಿ ಕ್ರಮ ಜರುಗಿಸಿ, ನಿಮ್ಮ ಹೇಳಿಕೆಯನ್ನು ಪಡೆದು, ನಂತರ ನ್ಯಾಯಾಂಗ ಬಂಧನಕ್ಕೆ ಕೋರಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:32 ಫ್ರಾಸಾ -13 ಇವರು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ದಿನಾಂಕ 06-05-2019 ರಂದು ಮಧ್ಯಾಹ್ನ 2.45 ರಿಂದ 5.15 ರ ಸಮಯದಲ್ಲಿ ಪಂಚರ ಸಮಕ್ಷಮ 1 ನೇ ಆರೋಪಿಯಾದ ನಿಮ್ಮ ಧ್ವನಿಗಳ 6 ಮಾದರಿಗಳನ್ನು ಪಡೆದು, ಅದನ್ನು ಎಂಒ-15 ರ ಸಿಡಿಯಲ್ಲಿ ದಾಖಲಿಸಿದ್ದೆ. ಆ ಸಮಯ ಬರೆದ ಮಹಜರು ನಿಪಿ-12 ಹಾಗೂ ಆಗ ತೆಗೆದ ಫೋಟೋಗಳು ನಿಪಿ-13 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸರಿ ಅಲ್ಲ

ಪ್ರಶ್ನೆ:33 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ದಿನಾಂಕ 18-03-2019 ರಂದು ಚಾಸಾ-1 ಇವರ ಮುಂದುವರಿದ ಹೇಳಿಕೆ, ಚಾಸಾ-2, 3, 6 ಇವರ ಹೇಳಿಕೆಗಳನ್ನು ಪಡೆದಿದ್ದೆ. ದಿನಾಂಕ 25-07-2019 ರಂದು ಚಾಸಾ-11 ಇವರಿಂದ ನಿಪಿ-22 ರಂತೆ ನಕಾಶೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೆ. ದಿನಾಂಕ 04-09-2019 ರಂದು 1 ನೇ ಆರೋಪಿಯ

ಸೇವಾ ವಿವರಗಳನ್ನು ನಿಪಿ-27 ರಂತೆ ಮತ್ತು ದಿನಾಂಕ 25-07-2019 ರಂದು ಚಾಸಾ-12 ಇವರಿಂದ ಎಫ್ ಎಸ್ ಎಲ್ ವರದಿಯನ್ನು ನಿಪಿ-38 ರಂತೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ34 ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷಿಯಲ್ಲಿ ದಿನಾಂಕ 29-04-2021 ರಂದು ಚಾಸಾ-13 ಇವರಿಂದ ನಿಪಿ-35 ರಂತೆ ವರದಿ, ಚಾಸಾ-6 ಮತ್ತು 16 ಇವರಿಂದ ಸಾಕ್ಷ್ಯ ಅಧಿನಿಯಮ ಕಲಂ 65(ಬಿ)ನೇದರ ಪ್ರಮಾಣ ಪತ್ರ ನಿಪಿ-25, 31 ರಿಂದ 33 ನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೆನು. ದಿನಾಂಕ 28-05-2021 ರಂದು ಚಾಸಾ-19 ಇವರಿಂದ ನಿಪಿ-39 ರಂತೆ ಅಭಿಯೋಜನಾ ಪರವಾನಿಗೆಯನ್ನು ಪಡೆದು, ತನಿಖೆಯನ್ನು ಪೂರ್ಣಗೊಳಿಸಿ, ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ35 ಫ್ರಾಸಾ-12 ಎಂ.ಸತ್ಯವತಿ, ಸರ್ಕಾರದ ಉಪಕಾರ್ಯದರ್ಶಿಗಳು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 21-10-2020 ರಂದು ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧೀಕ್ಷಕರು, ಅಪರಾಧ ಕ್ರಮಾಂಕ 3/19 ರ ತನಿಖೆಯ ದಾಖಲಾತಿಗಳಾದ ಕ್ರಮ ಸಂಖ್ಯೆ 1 ರಿಂದ 54 ರ ದಾಖಲೆಗಳು, 12 ಸಾಕ್ಷಿಗಳ ಹೇಳಿಕೆಯನ್ನು ಕಳುಹಿಸಿ, 1 ನೇ ಆರೋಪಿಯಾದ ನಿಮ್ಮನ್ನು ಅಭಿಯೋಜನೆಗೆ ಒಳಪಡಿಸಲು ಪರವಾನಿಗೆ ಕೋರಿದ್ದರು. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ನೀವು ಲಂಚದ ಬೇಡಿಕೆ ಇಟ್ಟಿದ್ದು ಕಂಡುಬಂತು. ಅದಕ್ಕಾಗಿ ಸರಕಾರದ ಪರವಾಗಿ ಅಭಿಯೋಜನಾ ಮಂಜೂರಾತಿಯನ್ನು ನೀಡಿದ್ದೆನು. ಸದರಿ ಆದೇಶ ನಿಶಾನೆ ಪಿ-39 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ: 36 ಫ್ರಾಸಾ-11 ಹೆಚ್.ಎಂ.ನಂಜುಂಡಸ್ವಾಮಿ ರಾಸಾಯನಿಕ ತಜ್ಞರು, ಎಫ್.ಎಸ್.ಎಲ್ ಬೆಂಗಳೂರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 11-04-20198 ರಂದು ಉಡುಪಿ ಎ.ಸಿ.ಬಿ., ಪೊಲೀಸರಿಂದ ಬಂದ ಸ್ವತ್ತುಗಳನ್ನು ಪರೀಕ್ಷೆ ಮಾಡಿದ್ದು, ಅವುಗಳಲ್ಲಿ ಆರೋಪಿತರಾದ ನಿಮ್ಮ ಬಲಗೈ ಮತ್ತು ಎಡಗೈಗಳನ್ನು ತೊಳೆದ ದ್ರಾವಣಗಳಾದ ವಸ್ತು ಸಂಖ್ಯೆ 5, 6, 8 ಮತ್ತು 9 ರಲ್ಲಿ ಸೋಡಿಯಂ ಕಾರ್ಬೋನೇಟ್ ಮತ್ತು ಫೀನಾಪ್ತಲೀನ್ ರಾಸಾಯನಿಕ ಅಂಶ ಕಂಡುಬಂದಿರುತ್ತದೆ ಹಾಗೂ ಕರೆನ್ಸಿ ನೋಟುಗಳು, ಸದರಿ ಲಂಚದ ಹಣವನ್ನು ಸುತ್ತಿದ್ದ A-4 ಸೈಜ್ ಪೇಪರ್ ನ್ನು ಪರೀಕ್ಷಿಸಿದಾಗ ಸಹ ಅದರಲ್ಲಿ ಫೀನಾಪ್ತಲೀನ್ ರಾಸಾಯನಿಕ ಅಂಶ ಕಂಡು ಬಂದಿರುತ್ತದೆ. ಅದಕ್ಕಾಗಿ ನಿಶಾನೆ ಪಿ-38 ರಂತೆ ವರದಿ ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:37 ಫ್ರಾಸಾ-10 ವೆಂಕಟೇಶ ಜಿ.ಎನ್, ಹಿರಿಯ ತಜ್ಞರು, ಆರ್.ಎಫ್.ಎಸ್.ಎಲ್., ಹುಬ್ಬಳ್ಳಿ, ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 24-05-2019 ರಂದು ಉಡುಪಿ ಎಸಿಬಿ ಪೊಲೀಸ್ ಠಾಣೆಯಿಂದ ಬಂದ ವಸ್ತು ಸಂಖ್ಯೆ 1, 13, 21, 22 ಸಿಡಿಗಳಲ್ಲಿ ಗ್ರಹಣವಾಗಿದ್ದ ಆರೋಪಿತರ ಮತ್ತು ದೂರುದಾರನ ನಡುವಿನ ಸಂಭಾಷಣೆಯ ಧ್ವನಿಯ ಮಾದರಿಗಳನ್ನು ಪರೀಕ್ಷೆ ಮಾಡಿ, ನಿ.ಪಿ.35 ರಂತೆ ವರದಿ ನೀಡಿರುತ್ತೇನೆ. ಸದರಿ ವಸ್ತು ಸಂಖ್ಯೆ 1, 13, 21, 22 ರಲ್ಲಿ ಗ್ರಹಣವಾದ ಧ್ವನಿಗಳು ಆರೋಪಿತರಾದ ನಿಮ್ಮ ಧ್ವನಿಗಳು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ:38 ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ?

ಉತ್ತರ: ಹೌದು. Defence witness are to be examined.

ಪ್ರಶ್ನೆಃ39 ನಿಮ್ಮ ಪರವಾಗಿ ಯಾರನ್ನಾದರೂ ವಿಚಾರಣೆ ಮಾಡುತ್ತೀರಾ?

ಉತ್ತರಃ ಹೌದು. ಕೊಡುತ್ತೇನೆ

(ಆರೋಪಿತನಿಗೆ ಈ ಮೇಲಿನ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು. ಆರೋಪಿತನಿಂದ ಬಂದಂತಹ ಉತ್ತರಗಳನ್ನು ಸ್ವತಃ ಬರೆದುಕೊಳ್ಳ ಲಾಯಿತು ಎಂದು ದೃಢೀಕರಿಸುತ್ತೇನೆ)

Sd/-

ದಿನಾಂಕಃ 29-08-2025

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ